# ಜೈಲುಗಳ ರೋಗಗ್ರಸ್ತ ಸ್ಥಿತಿಗೆ ಬೇಕು ಶಾಶ್ವತ ಚಿಕಿತ್ಸೆ

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅಪರಾಧಿಗಳು, ಗಂಭೀರ ಪ್ರಕರಣಗಳ ಆರೋಪಿಗಳು ನಿಯಮಬಾಹಿರವಾಗಿ ವಿಶೇಷ ಸವಲತ್ತುಗಳನ್ನು ಅನುಭವಿಸುತ್ತಿರುವ ವಿಡಿಯೊಗಳು ಇತ್ತೀಚೆಗೆ ಹರಿದಾಡಿ, ವ್ಯವಸ್ಥೆಯ ವ್ಯಂಗ್ಯಕ್ಕೆ ಕನ್ನಡಿ ಹಿಡಿದಿವೆ. ಜುಹಾದ್ ಹಮೀದ್ ಶಕೀಲ್ ಮನ್ನಾ ಎಂಬ ತರುಣ ಐಎಸ್ ಸಂಪರ್ಕ ಹೊಂದಿದ್ದು, ಯುವಕರನ್ನು ಭಯೋತ್ಪಾದನೆಗೆ ಸೇರಿಸಿದ ಆರೋಪದ ಮೇಲೆ ಜೈಲಿನಲ್ಲಿದ್ದಾನೆ. ವಿಕೃತ ಕಾಮದ ಹಲವು ಪ್ರಕರಣಗಳ ಅಪರಾಧಿಯಾಗಿ, 20 ವರ್ಷಗಳ ಶಿಕ್ಷೆ ಅನುಭವಿಸುತ್ತಿರುವ ಉಮೇಶ್ ರೆಡ್ಡಿಯೂ ಈಗ ಜೈಲು ಬಂದಿ. ಕೈಲಿ ಮೊಬೈಲ್ ಹಿಡಿದು ಜುಹಾದ್ ಕುಳಿತಿರುವಾಗ, ಜೈಲಿನಲ್ಲೇ ಇರುವ ಇನ್ನೊಬ್ಬನು ಆತನನ್ನು ಹೊಗಳುತ್ತಾನೆ. ಅದಕ್ಕೆ ನಗುಮೊಗದ ಕೃತಾರ್ಥಭಾವವನ್ನು ಗಂಭೀರ ಆರೋಪ ಹೊತ್ತಿರುವ ಇವನು ತುಳುಕಿಸುತ್ತಾನೆ. ಉಮೇಶ್ ರೆಡ್ಡಿ ಕೈಲೂ ಮೊಬೈಲ್ ಇದ್ದು, ಅವನಿರುವ ಜೈಲು ಕೋಣೆಯಲ್ಲಿ ಟಿ.ವಿ ಕೂಡ ಚಾಲೂ ಆಗಿದೆ. ಇವೆಲ್ಲವನ್ನೂ ವಿಡಿಯೊ ದೃಶ್ಯಗಳು ಸ್ಪಷ್ಟಪಡಿಸಿವೆ. ಇವಷ್ಟೇ ಅಲ್ಲ, ಜೈಲಿನಲ್ಲಿರುವ ದುಷ್ಕರ್ಮಿಗಳು ಮದ್ಯ ಸೇವನೆ ಮಾಡಿ ಮನಸೋ ಇಚ್ಛೆ ಕುಣಿದಾಡಿರುವ ಇನ್ನೊಂದು ವಿಡಿಯೊ ಕೂಡ ಆನಂತರ ಹರಿದಾಡಿತು. ಕಾರ್ತಿಕ್ ಅಲಿಯಾಸ್ ಚಿಟ್ಟೆ, ಧನಂಜಯ, ಮಂಜುನಾಥ ಹಾಗೂ ಚರಣ್ ರಾವ್ ಎಂಬ ವಿಚಾರಣಾಧೀನ ಕೈದಿಗಳು ಮದ್ಯಕೂಟ ಮಾಡಿದ ವಿಡಿಯೊ ಅದು. ಮನೆಯಲ್ಲಿ ಸುಖೀಭಾವದಲ್ಲಿ ಕುರುಕಲು ಮೆಲ್ಲುತ್ತಾ ಕುಡಿತದಲ್ಲಿ ನಿರತರಾಗುವಷ್ಟೇ ನಿರ್ಲಿಪ್ತ ವರ್ತನೆ ಈ ಆರೋಪಿಗಳದ್ದಾಗಿತ್ತು.

ರೇಣುಕಸ್ವಾಮಿ ಹತ್ಯೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್ ಕೂಡ ಈ ಹಿಂದೆ ಪರಪ್ಪನ ಅಗ್ರಹಾರದಲ್ಲಿಯೇ ಪಿಂಗಾಣಿ ಬಟ್ಟಲಲ್ಲಿ ಕಾಫಿ ಹೀರುತ್ತಾ ಜೈಲುವಾಸಿಗಳ ಜೊತೆ ಲೋಕಾಭಿರಾಮದಲ್ಲಿ ತೊಡಗಿದ್ದ ಫೋಟೊ ತುಣುಕು ಹರಿದಾಡಿ, ಕೆಲವು ಜೈಲು ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಲು ಇಂಬುಗೊಟ್ಟಿದ್ದ ನೆನಪಿನ್ನೂ ಮಾಸಿಲ್ಲ. ರೇಣುಕಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್‌ಗೆ ಜಾಮೀನು ನೀಡಿದ್ದನ್ನು ರದ್ದುಪಡಿಸಿ, ಮತ್ತೆ ಜೈಲಿಗೆ ಅಟ್ಟುವಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿ ಹೆಚ್ಚು ದಿನಗಳೇನೂ ಕಳೆದಿಲ್ಲ. ಆರೋಪಿ ಎಷ್ಟೇ ಪ್ರಭಾವಿ ಆಗಿದ್ದರೂ ನಿಯಮ ಮೀರಿ ಸೌಕರ್ಯ ಒದಗಿಸುವ ಪೊಲೀಸರ ಮೇಲೆ ಕಣ್ಣಿಡಬೇಕು ಎನ್ನುವುದನ್ನು ಕೂಡ ಸುಪ್ರೀಂ ಕೋರ್ಟ್ ಪರೋಕ್ಷವಾಗಿ ಕಟುಮಾತುಗಳಲ್ಲಿ ಹೇಳಿದೆ.

**ಆರೋಪಿ ಎಷ್ಟೇ ಪ್ರಭಾವಿ ಆಗಿದ್ದರೂ ನಿಯಮ ಮೀರಿ ಸೌಕರ್ಯ ಒದಗಿಸುವ ಪೊಲೀಸರ ಮೇಲೆ ಕಣ್ಣಿಡಬೇಕು ಎನ್ನುವುದನ್ನು ಸುಪ್ರೀಂ ಕೋರ್ಟ್ ಕಟುಮಾತುಗಳಲ್ಲಿ ಹೇಳಿದೆ.**

ಜೈಲುವಾಸಿಗಳ ಐಷಾರಾಮದ ವಿಡಿಯೊ ಹರಿದಾಡಿದ ನಂತರ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾವಣೆ ಮಾಡಿದರು. ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಿದರು. ಐಪಿಎಸ್ ಅಧಿಕಾರಿ ಅನ್ಶುಕುಮಾರ್ ಅವರನ್ನು ಜೈಲು ಸೂಪರಿಂಟೆಂಡೆಂಟ್ ಆಗಿ ನಿಯೋಜಿಸಲಾಯಿತು. ಇದೇ ಮೊದಲ ಬಾರಿಗೆ ಈ ಸ್ಥಾನಕ್ಕೆ ಐಪಿಎಸ್ ಅಧಿಕಾರಿಯೊಬ್ಬರನ್ನು ಪರಪ್ಪನ ಅಗ್ರಹಾರದಲ್ಲಿ ನಿಯೋಜಿಸುತ್ತಿರುವುದು. ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಲಾಗಿದ್ದು, ರಾಜ್ಯದ ಎಲ್ಲ ಜೈಲುಗಳ ಸ್ಥಿತಿಗತಿಯ ವಿವರಗಳನ್ನು ಕಲೆಹಾಕಲು ಒಂದು ತಿಂಗಳ ಗಡುವನ್ನು ಗೃಹ ಸಚಿವ ಜಿ. ಪರಮೇಶ್ವರ ನೀಡಿದ್ದಾರೆ. ಇವೆಲ್ಲವೂ ನಿರೀಕ್ಷಿತ ಪ್ರತಿಕ್ರಿಯೆ ಎಂಬಂತೆ ಆಗಿರುವ ಬೆಳವಣಿಗೆಗಳಷ್ಟೆ.

ಜೈಲುಗಳ ಸುಧಾರಣೆಗೂ ಸರ್ಕಾರ ಕೆಲವು ಮುಖ್ಯ ತೀರ್ಮಾನಗಳನ್ನು ಕೈಗೊಂಡಿದೆ. ಎಲ್ಲ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಏಕತ್ರ ವ್ಯವಸ್ಥೆಯಲ್ಲಿ ಪರಿಶೀಲಿಸಲು ಕಮಾಂಡ್ ಸೆಂಟರ್ ಸ್ಥಾಪನೆ, ಹೊಸ ಸಿ.ಸಿ. ಟಿ.ವಿ ಕ್ಯಾಮೆರಾಗಳ ಅಳವಡಿಕೆಯನ್ನು ₹2 ಕೋಟಿ ವೆಚ್ಚದಲ್ಲಿ ಮಾಡುವುದು, ಸಂವಹನ ಗೋಪುರಗಳ ಸ್ಥಾಪನೆಯನ್ನು ₹15 ಕೋಟಿ ವೆಚ್ಚದಲ್ಲಿ ಕೈಗೊಳ್ಳುವುದು... ಈ ಎಲ್ಲಕ್ಕೂ ಸರ್ಕಾರ ಅನುಮೋದನೆ ನೀಡಿರುವುದು ಮೆಚ್ಚತಕ್ಕ ಸಂಗತಿ.

ಇವೆಲ್ಲವೂ ಹಳವಂಡ ಆದಾಗ ನಾಗರಿಕರನ್ನು ತಣ್ಣಗಾಗಿಸಲು ಕೈಗೊಳ್ಳುವ ಮೇಲುಸ್ತರದ ಕ್ರಮಗಳು ಎನ್ನುವುದು ನಿಸ್ಸಂಶಯ. ಜೈಲುವಾಸಿಗಳಿಗೆ ಅಷ್ಟೆಲ್ಲ ಐಷಾರಾಮಿ ಸೌಕರ್ಯ ನಿಲುಕಲು ವ್ಯವಸ್ಥೆಯ ದೊಡ್ಡ ಕೈಗಳೇ ಕೆಲಸ ಮಾಡುತ್ತಿರುವುದು ಸುಸ್ಪಷ್ಟ. ಕೆಲವು ಪೊಲೀಸರ ವಿರುದ್ಧ ಕ್ರಮ ಕೈಗೊಂಡು, ತಕ್ಷಣಕ್ಕೆ ಶಮನ ಮಾಡುವ ವ್ಯಾಧಿ ಇದಲ್ಲ. ಎತ್ತರದ ಜೈಲು ಗೋಡೆಗಳ ಒಳಗೆ ತಾಂತ್ರಿಕ ಸವಲತ್ತು ನುಸುಳುತ್ತಿರುವುದಾದರೂ ಹೇಗೆ ಎನ್ನುವ ಗಂಭೀರ ಪ್ರಶ್ನೆಗೆ ಸರ್ಕಾರ ಶಾಶ್ವತವಾದ ಉತ್ತರ ಕಂಡುಕೊಳ್ಳಬೇಕಿದೆ. ಇಲ್ಲವಾದರೆ ಜಗತ್ತಿನ ಎದುರಲ್ಲಿ ರಾಜ್ಯದ ಕಾನೂನು ಸುವ್ಯವಸ್ಥೆಯು ಪದೇ ಪದೇ ನಗೆಪಾಟಲಿಗೆ ಈಡಾಗಬೇಕಾಗುತ್ತದೆ.

■ ವಿಶಾಖ ಎನ್.



ವಿಜಯ